1) ಮಂಗಳೂರಿನ ನೀರು ಮತ್ತು ನೈರ್ಮಲ್ಯ ವ್ಯವಸ್ಥೆ ಇತರ ಪಟ್ಟಣಗಳ ನೈರ್ಮಲ್ಯ ವ್ಯವಸ್ಥೆಗಳ ವಿಶ್ಲೇಷಣೆ.

2) ಕೈಗಾರಿಕೋದ್ಯಮಗಳ ಪರಿಸರ ನಿರ್ವಹಣಾ ಯೋಜನೆ.

3) ಭೂ ಬಳಕೆಯ ಯೋಜನೆ

4) ಪಶ್ಚಿಮ ಘಟ್ಟಗಳ ಜೀವಿ ವೈವಿಧ್ಯದ ಸಂವರ್ಧನೆ ಮತ್ತು ನಿರ್ವಹಣೆ.

5) ಘನ ತ್ಯಾಜ್ಯದ ನಿರ್ವಹಣೆ.

ಈ ವರದಿಯ ಆಧಾರದ ಮೇಲಿಂದ ಪರಿಸರ ಇಲಾಖೆಯ ಪ್ರಾಂತೀಯ ಕಛೇರಿಯನ್ನು ಮಂಗಳೂರಿನಲ್ಲಿ ಸ್ಥಾಪಿಸಲಾಗಿದ್ದು ಉಳಿದ ಶಿಫಾರಸುಗಳನ್ನು ಕುರಿತು ಸರ್ಕಾರವು ಪರಿಶೀಲಿಸುತ್ತಿದೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನೂತನವಾಗಿ ನಿರ್ಮಾಣವಾಗುವ ಕೈಗಾರಿಕೆಗಳಿಗೆ ಸಂಬಂಧಿಸಿದಂತೆ ಕೈಗಾರಿಕೆಗಳಿಗಾಗಿ ಹಾಗೂ ಆಭಿವೃದ್ಧಿ ಯೋಜನೆಗಳಿಗಾಗಿ ಪರಿಸರ ಆಘಾತ ಅಂಗೀಕರಣಕ್ಕಾಗಿ ರೂಪರೇಷೆಗಳನ್ನು ತಯಾರಿಸುವುದು ಎಂಬ ಶಿಫಾರಸ್ಸನ್ನು ಸರ್ಕಾರಕ್ಕೆ ಸಲ್ಲಿಸಲಾಗಿದೆ. ಇದರ ಬಗ್ಗೆ ಪೂರ್ಣಪ್ರಮಾಣದ ಯೋಜನಾ ವರದಿಯನ್ನು ಡ್ಯಾನಿಡಾ ಸಹಯೋಗದೊಂದಿಗೆ ಸಿದ್ದಪಡಿಸಲಾಗುವುದು. ಈ ಪೂರ್ಣಪ್ರಮಾಣದ ಯೋಜನಾ ವರದಿಯನ್ನು ಆಧರಿಸಿ ಮುಂದಿನ ಕ್ರಮಕೈಗೊಳ್ಳಲಾಗುವುದು.

ವಿಷಯ:- ಜಿಲ್ಲಾಪಂಚಾಯತ್, ತಾಲ್ಲೂಕು ಪಂಚಾಯತ್ ಗ್ರಾಮಪಂಚಾಯತ್‌ಗಳಿಗೆ ಸಹಾಯ ಮಾಡುವ ಮಾದರಿ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 136 (200)

ಡಾ:ಎಂ.ಪಿ.ಕರ್ಕಿ (ಕುಮಟಾ):- ಮಾನ್ಯ ಗ್ರಾಮೀಣಾನಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಜಿಲ್ಲಾ ಪಂಚಾಯತ್, ತಾಲ್ಲೂಕು ಪಂಚಾಯತ್ ಮತ್ತು ಗ್ರಾಮ ಪಂಚಾಯತ್‌ಗಳಿಗೆ ಸಹಾಯ ಮಾಡುವ ಮಾದರಿಯನ್ನು ಪುನರ್‌ಪರಿಶೀಲಿಸುವ ಬಗ್ಗೆ ಸಮಿತಿನಯನ್ನು ರಚಿಸಲಾಗಿದೆಯೇ?

ಆ) ಹಾಗಿದ್ದಲ್ಲಿ ಸಮಿತಿಯು ತನ್ನ ವರದಿಯನ್ನು ಒಪ್ಪಿಸಿದೆಯೇ?

ಇ) ವರದಿಯನ್ನು ಸಹಾಯ ನೀಡುವ ಬಗ್ಗೆ ಯಾವ ಮಾನದಂಡವನ್ನು ಅಳವಡಿಸಲಾಗಿದೆ ಎನ್ನುವುದನ್ನು ತಿಳಿಸುವುದು?

ಶ್ರೀ ಎಂ.ಪಿ.ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು):-

ಅ) ಹೌದು. (ಕರ್ನಾಟಕ ಪಂಚಾಯತ್‌ರಾಜ್ ಅಧಿನಿಯಮದ 1993ರ ಪ್ರಕರಣ

267ರಡಿ ಜಿಲ್ಲಾ ಪಂಚಾಯತ್‌ಗಳ, ತಾಲ್ಲೂಕು ಪಂಚಾಯತ್‌ಗಳ ಹಾಗೂ ಗ್ರಾಮ ಪಂಚಾಯತ್‌ಗಳ ಆರ್ಥಿಕ ವ್ಯವಸ್ಥೆಯನ್ನು ಪರಿಶೀಲಿಸಲು ಮತ್ತು ಸರ್ಕಾರಕ್ಕೆ ಶಿಫಾರಸ್ಸು ಮಾಡಲು ರಾಜ್ಯ ಹಣಕಾಸು ಆಯೋಗವನ್ನು ರಚಿಸಲಾಗಿದೆ.

ಆ) ಇಲ್ಲಾ

ಇ) ಉದ್ಭವಿಸುವುದಿಲ್ಲ.

ವಿಷಯ:- ಖಾಸಗಿ ಶಿಕ್ಷಣ ಸಂಸ್ಥೆಗಳಿಂದ ವಂತಿಗೆ ಸ್ವೀಕಾರ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 137 (201)

ಶ್ರೀ ಡಾ:ಎಂ.ಪಿ.ಕರ್ಕಿ (ಕುಮಟಾ):- ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸರ್ಕಾರದ ಹೊಸ ಶೈಕ್ಷಣಿಕ ನೀತಿಯ ಪ್ರಕಾರ ಖಾಸಗಿ ಶಿಕ್ಷಣ ಸಂಸ್ಥೆಗಳು ವಂತಿಗೆಯನ್ನು ಸ್ವೀಕರಿಸಬಾರದೆಂಬುದು ಅಸಮಂಜಸವಲ್ಲವೆ?

ಆ) ಸರ್ಕಾರವು ಖಾಸಗಿ ಶಿಕ್ಷಣ ಸಂಸ್ಥೆಗಳ ಚಟುವಟಿಕೆಗಳ ವಿಸ್ತರಣೆಗೆ ಅನುದಾನವನ್ನು ನೀಡದೆ ಇರುವುದರಿಂದ ಖಾಸಗಿ ಆಡಳಿತ ಮಂಡಳಿಗಳು ವಂತಿಗೆಯನ್ನು ಸ್ವೀಕರಿಸಲು ಅನುಮತಿಸುವುದು ಸೂಕ್ತವಲ್ಲವೇ?

ಶ್ರೀ ಬಿ.ಸೋಮಶೇಖರ್ (ಉನ್ನತ ಶಿಕ್ಷಣ ಸಚಿವರು):-

ಅ) ಇಲ್ಲ.

ಆ) ಪ್ರಶ್ನೆ ಉದ್ಭವಿಸುವುದಿಲ್ಲ.

ವಿಷಯ:- ಗ್ರಾಮ ಪಂಚಾಯಿತಿಗಳಲ್ಲಿ ತೆರವಾಗಿರುವ ಸ್ಥಾನಗಳ ಭರ್ತಿ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 129 (405)

ಶ್ರೀ ಹೆಚ್.ಎಸ್.ಮಹದೇವಪ್ರಸಾದ್ (ಗುಂಡ್ಲುಪೇಟೆ):- ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಜಿಲ್ಲಾ ಪಂಚಾಯತಿ, ತಾಲ್ಲೂಕು ಪಂಚಾಯತಿ ಮತ್ತು ಗ್ರಾಮ ಪಂಚಾಯತ್ ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಅಧಿಕಾರ ಅವಧಿ ನಿಗದಿಗೊಳಿಸಲಾಗಿದೆಯೇ?

ಆ) ಈ ಬಗ್ಗೆ ನೇಮಿಸಿದ್ದ ಸಮಿತಿಯು ಸರ್ಕಾರಕ್ಕೆ ವರದಿ ಸಲ್ಲಿಸಿದೆಯೇ?

ಇ) ಹಾಗಿದ್ದಲ್ಲಿ ಸರ್ಕಾರವು ಕೈಗೊಳ್ಳಲಿರುವ ಕ್ರಮಗಳೇನು?

ಈ) ಗ್ರಾಮ ಪಂಚಾಯ್ತಿಗಳಲ್ಲಿ ಪ್ರಾರಂಭದಿಂದಲೂ ಖಾಲಿ ಇರುವ ಪರಿಶಿಷ್ಟ